## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ: 67/2019</u>

**ಸಾಕ್ಷಿಯನ್ನು ದಿಃ 31.05.2023 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಅಪ್ಪಣ್ಣ | ಸಿಡಬ್ಲ್ಯೂ:6 | ಪಿಡಬ್ಲ್ಯೂ:4 |
| ತಂದೆಯ ಹೆಸರು | ಲೇಟ್ ರಾಮಯ್ಯ | | |
| ವಯಸ್ಸು | 59 ವರ್ಷ | | |
| ಕೆಲಸ | ವ್ಯವಸಾಯ | | |
| ವಾಸಸ್ಥಳ | ಹೊಸ ಮಾರುತಿ ಬಡಾವಣೆ,<br>ಹುಣಸೂರು | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ಅಮಾನತ್ತು ಮಹಜರ್ ನಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಮಹಜರ್ ಅನ್ನು ನಿಪಿ. 4 ಎಂದು ಸಾಕ್ಷಿಯ ಸಹಿಯನ್ನು ನಿಪಿ. 4(ಎ) ಎಂದು ಗುರುತಿಸಲಾಯಿತು. ಈಗ್ಗೆ 3 ವರ್ಷಗಳ ಹಿಂದೆ ನಾನು ಹುಣಸೂರು ನಗರ ಪೊಲೀಸ್ ಠಾಣೆಯಲ್ಲಿ ಈ ಸಹಿ ಮಾಡಿದ್ದೇನೆ. ನಾನು ಪೇಪರ್ ಎಜೆನ್ಸಿ ಹೊಂದಿದ್ದು, ಪೇಪರ್ ಹಾಕಲೆಂದು ಪೊಲೀಸ್ ಠಾಣೆಗೆ ಆಗಾಗ್ಗೆ ಹೋಗುತ್ತಿರುತ್ತೇನೆ. ಆ ರೀತಿ ಹೋದಂತಹ ಸಂದರ್ಭದಲ್ಲಿ ಸದರಿ ಸಹಿ ಮಾಡಿರುತ್ತೇನೆ. ಯಾವ ವಿಚಾರಕ್ಕಾಗಿ ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸದರಿ ಸಹಿಯನ್ನು ಬೆಳಗಿನ ಹೊತ್ತು ಮಾಡಿರಬಹುದು, ಸರಿಯಾಗಿ ನೆನಪಿಲ್ಲ. ನಿಪಿ. 4 ರಲ್ಲಿ ಬರೆದಿರುವ ಯಾವುದೆ ವಿಚಾರಗಳು ನನಗೆ ತಿಳಿದಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲು ಸಸಅ ರವರಿಂದಃ–**

ದಿಃ 02.06.2018 ರಂದು ಹುಣಸೂರು ಪಟ್ಟಣದ ಪೊಲೀಸ್ ಠಾಣೆಗೆ ಗಣಕಯಂತ್ರ ಕೊಠಡಿಯಲ್ಲಿ ಪೊಲೀಸರು ಕೋರಿಯ ಮೇರೆಗೆ ನಾನು ಹಾಜರಾಗಿದ್ದು, ಆ ಸಮಯದಲ್ಲಿ ಕಳ್ಳತನಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಅಮಾನತ್ತು ಮಹಜರ್ ಕ್ರಮ ಜರುಗಿಸಿ ಇದಕ್ಕೆ ನನ್ನ ಸಹಿ ಪಡೆದುಕೊಂಡರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರು ನಮ್ಮ ಸಮಕ್ಷಮ ಕೆಎ 32 ಇಪಿ 2953 ವುಳ್ಳ (ಒರಿಜಿನಲ್ ನಂಬರ್ ಕೆಎ 11 1783 ) ಡೂಬ್ಲಿಕೇಟ್ ನಂಬರಿನ ಹೊಂಡಾ ಆಕ್ಟಿವಾ ಫೋರ್ಜಿ ಸ್ಕೂಟರ್, ಸದರಿ ಸ್ಕೂಟರ್ ನ 2 ಕೀ ಗಳು, 2 ಕಬ್ಬಿಣದ ಸರಳುಗಳು, 3 ಮೊಬೈಲ್ ಗಳು, 4,860/– ರೂ. ನಗದು ಹಣವನ್ನು ಪೊಲೀಸರು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 6 ಮತ್ತು ಆರೋಪಿಗಳಾದ ಕಿರಣ್, ವಿನೋದ್ ಮತ್ತು ಸಂದೀಪ್ ರವರು ಹಾಜರಿದ್ದು, ಅವರು ಸಹ ಈ ಮಹಜರ್ ಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಮಹಜರ್ ಅನ್ನು ಬೆಳಿಗ್ಗೆ 6 ರಿಂದ 7 ಗಂಟೆ ವರೆಗೆ ಗಣಕಯಂತ್ರದಲ್ಲಿ ಟೈಪ್ ಮಾಡಲಾಯಿತು ಎಂದರೆ ನನಗೆ ನೆನಪಿಲ್ಲ. ಈ ಅಮಾನತ್ತು ಮಹಜರ್ ನಲ್ಲಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಆರೋಪಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೂಡ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಮೇಲ್ಕಂಡ ವಿಚಾರ ತಿಳಿಸಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದರೂ ಈಗ ಆರೋಪಿಗಳಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹೇಳಿಕೆಯನ್ನು ನಿಪಿ. 5 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು ಃ ಇಲ್ಲ</u>**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.